ಅಡುಗೆ ಲೇಟು... ಅಂತ ಭಟ್ಟರು ಹೇಳಿಕೊಂಡು ನಗುತ್ತಾ ಬಂದವರಿಗೆ ಸಾಮಾನು ಕಟ್ಟಿ ಕೊಡುತ್ತಾರೆ. ಇನ್ನೊಂದಷ್ಟು ಕುಟುಂಬಗಳು ದೇವಾಲಯದ ವಠಾರದಲ್ಲಿ, ಚರ್ಚ್‌ನ ಕಟ್ಟಡದಲ್ಲಿ ತಂಗಲು ವ್ಯವಸ್ಥೆ ಆಗಿರುವ ಕಾರಣ ಎಲ್ಲರೂ ಸುರಕ್ಷಿತರಾಗಿದ್ದಾರೆ. ಆದರೆ, ನಾಯಿ ಕೋಳಿ ದನಗಳ ಅವಸ್ಥೆ ಏನಾಗಿದೆಯೋ... ದೇವರೇ ಬಲ್ಲ.

'ಏನೋ... ಪ್ರಕೃತಿಯ ಆಟಕ್ಕೆ ಯಾರು ಏನು ಮಾಡಲು ಸಾಧ್ಯ? ಒಬ್ಬರಿಗೊಬ್ಬರು ಆಗಿ ಬಂದರೆ ಸಾಕಷ್ಟೆ. ನಾಳೆ ಸರೋಜನ ಮನೆಗೆ ಹೋಗಿ ಎಲ್ಲಾ ಸರಿಗಟ್ಟು ಮಾಡಿ ಬರುವ... ಇನ್ನು ನೀರು ನುಗ್ಗುವಷ್ಟು ಮಳೆ ಬರಲಾರದು ಅಂತನ್ನಿಸುತ್ತದೆ' ಅನ್ನುತ್ತಾ ಕಮಲ ಒಳಗೆ ಅನ್ನಕ್ಕೆ ನೀರಿಡಲು ನೆನಪಾಗಿ ಎದ್ದು ಹೋದಳು.

ಮಾರನೆ ದಿನ ಹೋಗಿ ನೋಡಿದರೆ ಸರೋಜಳ ಮನೆ ತುಂಬಾ ಕೆಸರು. ಹಾಕಲು ಒಂದೇ ಒಂದು ಬಟ್ಟೆಯಿಲ್ಲ. ಬೀರು, ಕಪಾಟು ಎಲ್ಲಾ ಕಡೆ ನೀರು ನುಗ್ಗಿ ಮನೆ ಇಡೀ ಕೆಸರುಮಯ. ಸಿಂಡು ವಾಸನೆ. ಬವಳಿ ಬಂದು ಸರೋಜ ಅಲ್ಲೇ ಕುಸಿದು ಕುಳಿತಳು. ಕಮಲ ಅವಳ ಕುಳ್ಳಿರಿಸಿ, ಮೆಲ್ಲಗೆ ತಲೆ ಸವರತೊಡಗಿದಳು. ದುಃಖದ ಕಟ್ಟೆ ಕಟ್ಟು ಬಿಚ್ಚಿಕೊಂಡಿತು. ಅಳುವಷ್ಟು ಅಳಲಿ ಅಂತ ಕಮಲಳೂ ಸುಮ್ಮಗಾದಳು. ಈಗ ತುಸು ನಿರಾಳವಾದಂತೆನಿಸಿತು ಅವಳಿಗೆ. ಇಬ್ಬರು ಸೇರಿ ಕೆಸರು ಬಟ್ಟೆಯನ್ನೆಲ್ಲಾ ಗಂಟು ಕಟ್ಟಿ ಈಚೆಕರೆಗೆ ಹೊತ್ತುಕೊಂಡು ಬಂದರು. ಬರೋಬ್ಬರಿ ಐದು ಗೋಣಿ ಬಟ್ಟೆಗಂಟು. ಒಂದು ಬಟ್ಟೆಯನ್ನೂ ಸರೋಜಳಿಗೆ ಬಿಡದೆ ತಾನೇ ತೊಳೆಯ ಹತ್ತಿದಳು ಕಮಲ.

ಒಗೆದಷ್ಟೂ ಕೆಸರು ಬಿಡುತ್ತಿದೆ. ಚೋಳು ಬಿಡುವಲ್ಲಿಯವರೆಗೂ ಒಗೆದೇ ತೀರುತ್ತೇನೆ ಅಂತ ಕಮಲ ಒಗೆಯುತ್ತಿದ್ದಾಳೆ. ಸರೋಜಳಿಗೆ ತಾನು ಅಂದು ತೊಳೆಯದೇ ಬಿಟ್ಟ ಬಟ್ಟೆಯೆಲ್ಲಾ ತೇಲಿ ಬಂದಂತಾಗಿ ಮನಸು ಹನಿಗಣ್ಣಾಗುತ್ತಿದೆ.

ದಾಸು ಕೊಟ್ಟಗೆ, ಉಪ್ಪರಿಗೆ, ಅಟ್ಟ, ಅಡಿ, ಎಲ್ಲ ಕಡೆ ನೇಕೆ ಕಟ್ಟಿ ಕೊಟ್ಟಿದ್ದಾನೆ. ಒಗೆದ ಬಟ್ಟೆಯನ್ನೆಲ್ಲ ಜಾಳಿಸಿ ಜಾಳಿಸಿ ಹಿಂಡಿ ಕಮಲ ಕೊಟ್ಟರೆ, ಸರೋಜ ನೇಕೆಯ ಮೇಲೆ ಹರವುತ್ತಿದ್ದಾಳೆ.

ಹೊರಗೆ ಒಯ್ಯಾಪ್ರೆಯಲ್ಲಿ ಈಸಿ ಚೇರಿನಲ್ಲಿ ಕುಳಿತ ಮಾದಪ್ಪ ಗೌಡರಿಗೆ ಮಳೆಗೆ ಶಪಿಸಬೇಕೋ, ವಂದಿಸಬೇಕೋ ಗೊತ್ತಾಗದೆ, ಈ ಮಳೆಗೆ ಒಂದು ಚಹಾ ಸಿಕ್ಕಿದರೆ ಚೆಂದ ಇತ್ತು ಅಂತ ಅಂದುಕೊಳ್ಳುತ್ತಿದ್ದಾರೆ. ಅವರ ಇಂಗಿತವನ್ನು ಅರ್ಥೈಸಿಕೊಂಡಂತೆ ಸರೋಜಳೇ ಕಡಕ್ ಚಹಾ ತಂದು ಮಾವನ ಮುಂದೆ ಇಡುತ್ತಿದ್ದಾಳೆ. ಗಳದ ಮೇಲೆ ಹರವಿಕೊಂಡ ಬಟ್ಟೆಗಳ ಸೊಬಗು ನೋಡುತ್ತಾ ಮಾದಪ್ಪ ಗೌಡರು ಚಹಾ ಹೀರುತ್ತಿದ್ದಾರೆ. ಅಹಾ! ಹೀಗಿದ್ದರೆ ಬದುಕಿಗೂ ಒಂದು ರುಚಿ. ಈ ಹೊತ್ತಿನಲ್ಲಿ ಮಡದಿ ಇರಬೇಕಿತ್ತು ಅಂತ ಮಡದಿಯ ನೆನಪು ತೀವ್ರವಾಗಿ ನುಗ್ಗಿ ಹೃದಯ ಭಾರ ಆಗುತ್ತದೆ.

ಮಂಕ್ರ ಬೊಳ್ಳ ಹೋಗಿ ಬಿಟ್ಟನಂತೆ! ಸೀನುವಿಗೆ ಕರೆ ಮಾಡಿ ಯಾರೋ ಅರುಹುತ್ತಿದ್ದಾರೆ. ಸೇತುವೆಯೂ ತುಂಡಾಗಿ ಸಂಪರ್ಕವೇ ಇಲ್ಲದಂತೆ ಆಗಿಬಿಟ್ಟಿದೆ. ಇನ್ನು ಹೇಗೆ ದೇಹವನ್ನು ಹುಡುಕುವುದೋ? ವಾರಸುದಾರರ್ ಇಲ್ಲದ ಜೀವಕ್ಕೆ ಜವಾಬ್ದಾರರ್ ಯಾರ್?

'ಛೆ! ಹಿಂಗಾಗುದು ಬೇಡಾಗಿತ್, ಸುಡುಗಾಡ್ ಮಳೆಗೆ ಇವನೇ ಬೇಕಿತ್ತಾ...' ಗೌಡರ ಕಣ್ಣುಗಳು ಒಮ್ಮಿಂದೊಮ್ಮೆಗೆ ಬಾಡಿಕೊಳ್ಳುತ್ತವೆ. ದಡದಲ್ಲಿ ಒಂದಷ್ಟು ಯುವಕರು ನಿಂತು ನೋಡುತ್ತಿದ್ದಾರೆ ಬಿಟ್ಟರೆ ಉಳಿದಂತೆ ಯಾರಿಗೂ ಏನು ಮಾಡಲಾಗುತ್ತಿಲ್ಲ. ಅನತಿ ದೂರದಲ್ಲಿ ಹೊಳೆಬದಿಯ ತಿರುವಿನ ಮುಡಂಗಿ ಬುಡದಲ್ಲಿ ಏನೋ ಸಿಕ್ಕಿ ಹಾಕಿಕೊಂಡಂತೆ ತೋರುತ್ತಿದೆ. ಒಮ್ಮೆ ತಲೆಯಂತೆಯೂ ತೆಂಗಿನ ಕಾಯಿಯಂತೆಯೂ ಗೋಚರಿಸುತ್ತಿದೆ. ಕ್ಷಣದಲ್ಲಿ ಮೇಲಿನಿಂದ ನುಗ್ಗಿ ಬರುತ್ತಿರುವ ಕೆಂಬಣ್ಣದ ನೀರು ಎಲ್ಲವನ್ನೂ ಕುರುಹೇ ಇಲ್ಲದಂತೆ ಸೆಳೆದುಕೊಂಡು ಹೋಗುತ್ತಿದೆ.

●

**ಅರೆಭಾಷೆ ಪದಗಳ ಅರ್ಥ**

ಹಂಞ - ಸ್ವಲ್ಪ
ನ್ಯಾವಸ - ಉಬ್ಬಸ
ಕೋಸಿ - ಧರಿಸಿ
ಬೊಳ್ಳ - ಪ್ರವಾಹ
ಮನಾರ - ಚೆನ್ನಾಗಿ
ಬೊಡಿ - ದಣಿವು
ಚಿರಿಂಬಿ- ಜಾಳಿಸಿ
ಜಂಬರ - ಕಾರ್ಯಕ್ರಮ
ಪಾಲ - ಕಾಲುಸಂಕ
ಒಯ್ಯಾಪ್ರೆ- ಗುಡಿಸಲು
ನೇಕೆ- ದಾರ
ಪರಂಚು- ಬೈಯ್ಯು